ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/01/ಐಡಿಪಿ/2023–24

ಆಯುಕ್ತರ ಕಛೇರಿ,
ಅರಮನೆ ರಸ್ತೆ ಬೆಂಗಳೂರು–01
ದಿನಾಂಕ: 14.09.2023

**ಸುತ್ತೋಲೆ**

ವಿಷಯ ; ನೇತ್ರದಾನದ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸುವ ಸಾಮಾಜಿಕ ಕಳಕಳಿಯ 67 ನೇ ರಾಷ್ಟ್ರ ಪ್ರಶಸ್ತಿ ವಿಜೇತ ಕನ್ನಡದ "ಅಕ್ಷಿ" ಚಲನಚಿತ್ರವನ್ನು ವೀಕ್ಷಿಸುವ ಕುರಿತು.

ಉಲ್ಲೇಖ ; ರಾಜ್ಯ ಸರ್ಕಾರದ ಪತ್ರ ಸಂಖ್ಯೆ:ಯುಸೇಇ/ರಾ.ಸೇ.ಯೋ/19/2021/2023–24 ದಿನಾಂಕ: 05.09.2023

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕಲಾದೇಗುಲ ಸ್ಟುಡಿಯೋ ಮೂಲಕ ನಿರ್ಮಿತವಾದ ಕನ್ನಡದ "ಅಕ್ಷಿ" ಚಲನಚಿತ್ರವು ನೇತ್ರದಾನದ ಬಗ್ಗೆ ಸಮುದಾಯದಲ್ಲಿ ಅರಿವು ಮತ್ತು ಜಾಗೃತಿ ಮೂಡಿಸುವ ಸಾಮಾಜಿಕ ಕಳಕಳಿಯನ್ನು ಹೊಂದಿದೆ. ಈ ಚಲನವಚಿತ್ರಕ್ಕೆ ಭಾರತ ಸರ್ಕಾರದ 2019ರ National Film Awards ಲಭಿಸಿದೆ.

ಶಿಕ್ಷಣ ಸಂಸ್ಥೆಗಳಲ್ಲಿನ ವಿದ್ಯಾರ್ಥಿ, ಶಿಕ್ಷಕ, ಬೋಧಕ, ಮತ್ತು ಸಿಬ್ಬಂದಿಗಳ ಮೂಲಕ ಅವರ ಕುಟುಂಬ ವರ್ಗಕ್ಕೆ ನೇತ್ರದಾನದ ಅರಿವನ್ನು ಮೂಡಿಸುವ ಉದ್ದೇಶದಿಂದ ಸಂಸ್ಥೆಯಲ್ಲಿ ಈ ಚಲನಚಿತ್ರ ಪ್ರದರ್ಶನಕ್ಕೆ ಅವಕಾಶವನ್ನು ಕಲ್ಪಿಸಲು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ. ಕಾರಣ ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಗೊಳಪಡುವ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಸಾಮಾಜಿಕ ಕಳಕಳಿಯುಳ್ಳ ಈ ಚಲನಚಿತ್ರವನ್ನು ತಮ್ಮ ಸಂಸ್ಥೆಗಳಲ್ಲಿ ಪ್ರದರ್ಶಿಕ್ಕೆ ಅನುವು ಮಾಡಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ಚಲನಚಿತ್ರ ವಿಕ್ಷೀಸಿ ನೇತ್ರದಾನದ ಮಹತ್ವವನ್ನು ಅರಿಯುವಂತೆ ವ್ಯವಸ್ಥೆಗೊಳಿಸಲು ತಿಳಿಸಿದೆ. ಈ https://forms.gle/oLr9am4subpNip699 ಕೊಂಡಿಯ ಮೂಲಕ ತಮ್ಮಿಂದ ಪಡೆಯಲಾದ ಮಾಹಿತಿಯನ್ನಾದರಿಸಿ ಕಲಾದೇಗುಲ ಸ್ಟುಡಿಯೋದ ಸಿಬ್ಬಂದಿಯವರು ಸಂಸ್ಥೆಯನ್ನು ಸಂಪರ್ಕಿಸಿ ಚಲನಚಿತ್ರ ಪ್ರದರ್ಶನಕ್ಕೆ ವ್ಯವಸ್ಥೆಗೊಳಲಿಸಲಿದ್ದಾರೆ.ಈ ಕುರಿತು ಅಗತ್ಯ ಕ್ರಮವಹಿಸಲು ಪ್ರಾಚಾರ್ಯರುಗಳಿಗೆ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು (ಆಡಳಿತ)

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಪ್ರಾಚಾರ್ಯರುಗಳಿಗೆ –ಸೂಕ್ತ ಕ್ರಮಕ್ಕಾಗಿ

1. ರಾಜ್ಯ ಎನ್.ಎಸ್.ಎಸ್ ಅಧಿಕಾರಿಗಳು, ರಾಜ್ಯ ಎನ್ ಎಸ್ ಎಸ್ ಕೋಶ, ಬೆಂಗಳೂರು
2. ಇ–ಆಡಳಿತ ವಿಭಾಗಕ್ಕೆ ವೆಬ್ ಸೈಟ್ ನಲ್ಲಿ ಪ್ರಕಟಿಸಲು
3. ಕಛೇರಿ ಪ್ರತಿ

D:\16.03.2021\DTE All Files-2023-24\IDP 2023-24